ದಿನಾಂಕ 11/12/2015 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಹೆಚ್.ಡಿ.ಆರ್. ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ನಾನು ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸದರಿ ಬೈಕು ನಮ್ಮ ಬಸ್ಸಿಗೆ ಹಿಂಭಾಗದಿಂದ ಬಂದು ಡಿಕ್ಕಿ ಪಡಿಸಿರುವ ಬಗ್ಗೆ ಒಂದು ಫೊಟೋ ಮತ್ತು ಅದರ ಸಿಡಿಯನ್ನು ಹಾಜರುಪಡಿಸಿದ್ದು, ಫೊಟೋವನ್ನು ನಿಶಾನೆ ಆರ್-1 ಮತ್ತು ಸಿಡಿಯನ್ನು ಆರ್-1(ಎ) ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರುತ್ತೇನೆ.

ಪಾಟೀ ಸವಾಲುಃ ಶ್ರೀ ಎನ್.ವಿ. ವಕೀಲರಿಂದ ( ಅರ್ಜಿದಾರರ ಪರವಾಗಿ)

ನಮ್ಮ ಬಸ್ಸು ಮತ್ತು ಬೈಕಿನ ನಡುವೆ ಈ ಅಪಘಾತವಾಗಿರುತ್ತದೆ. ಪೊಲೀಸರು ತನಿಖೆ ಮಾಡಿ ನನ್ನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ನಿಜ. ಆ ಕ್ರಿಮಿನಲ್ ಪ್ರಕರಣದಲ್ಲಿ ನಾನು ಆರೋಪಿಯಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದರೆ ನಿಜ. ನಿಶಾನೆ ಪಿ-4 ಸ್ಕೇಚ್‌ನಲ್ಲಿ ಬಸ್ಸು ರಸ್ತೆ ಮಧ್ಯದಲ್ಲಿ ನಿಂತಿರುವಂತೆ ಬರೆದಿದ್ದಾರೆ ಎಂದರೆ ಸುಳ್ಳು. ನಾನೇ ಬಸ್ಸನ್ನು ಅತಿವೇಗವಾಗಿ ಓಡಿಸಿಕೊಂಡು ಹೋಗುತ್ತ ಯಾವುದೇ ಸೂಚನೆ ಕೊಡದೇ ಏಕಾಏಕಿ ಬ್ರೇಕ್ ಹಾಕಿದ್ದರಿಂದ ಈ ಅಪಘಾತವಾಗಿದೆ ಎಂದರೆ ಸುಳ್ಳು. ಪೊಲೀಸರು ಸಲ್ಲಿಸಿ'ರುವ ದೋಷಾರೋಪಣ ಪಟ್ಟಿಯನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ನಿಜ. ರಾ ಅರ್ಜಿದಾರರಿಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಪರಿಹಾರ ಕೊಡಬೇಕಾಗುತ್ತದೆ ಎಂದು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

**(ಎನ್. ಕೃಷ್ಣಯ್ಯ)**
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಅರಕಲಗೂಡು.